ವಿಷಯ : - ಮುಳಬಾಗಿಲ ಪಟ್ಟಣದಲ್ಲಿ ಗುರುಭವನ ಕಟ್ಟಲು ಮಂಜೂರಾತಿ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 336(400)

ಶ್ರೀ ಎಂ.ವಿ. ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ಪಟ್ಟಣದಲ್ಲಿ ಗುರುಭವನ ಕಟ್ಟಲು ಸರ್ಕಾರದವರು ಮಂಜೂರಾತಿ ನೀಡಿದ್ದು ಯಾವಾಗ?

ಆ) ಕಟ್ಟಡದ ನಿರ್ಮಾಣ ಕಾರ್ಯವನ್ನು ಇನ್ನೂ ಪ್ರಾರಂಭ ಮಾಡದಿರಲು ಕಾರಣಗಳೇನು.

ಇ) ಸದರಿ ಕಟ್ಟಡವನ್ನು ಆದಷ್ಟು ಬೇಗನೆ ಕಟ್ಟಲು ಸರಕಾರದವರು ಕ್ರಮ ಕೈಗೊಳ್ಳುವರೇ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಮಂಜೂರಾತಿ ನೀಡಿರುವುದಿಲ್ಲ.

ತಾಲ್ಲೂಕು ಮಟ್ಟದಿಂದ ಇನ್ನೂ ಪ್ರಸ್ತಾವನೆ ಬರದೇ ಇರುವುದರಿಂದ.

ಪ್ರಸ್ತಾವನೆ ಬಂದಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : - ಪಟ್ಟಿಯನ್ನು ಮಂಡಿಸಲಾಯಿತು.

ನಿಯಮ 166ರ ಮೇರೆಗೆ ಶ್ರೀ ವೀರಪ್ಪಮೊಯ್ಲಿ ಸಚಿವ ಸಂಪುಟದ ಮೇಲೆ ಅವಿಶ್ವಾಸ ನಿರ್ಣಯ ಮಂಡನೆಗೆ ಅನುಮತಿ ಕೋರಿಕೆ.

(ವಿರೋಧ ಪಕ್ಷದ ನಾಯಕರು)

ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಅಧ್ಯಕ್ಷರೇ, ನಾವು ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 166ರ ಅಡಿಯಲ್ಲಿ ಅವಿಶ್ವಾಸ ಠರಾವು ಮಂಡಿಸಬೇಕೆಂದು ಈಗಾಗಲೇ ಒಂದು ಮೋಷನ್‌ನನ್ನೂ ಮಾನ್ಯ ಕಾರ್ಯದರ್ಶಿಯವರಿಗೆ ಕಳುಹಿಸಿದ್ದೇವೆ. ಈ ಮೋಷನ್‌ನನ್ನು ನಮ್ಮ ಪಕ್ಷದವರು, ಬಿ.ಜೆ.ಪಿ.ಯವರು ಮತ್ತು ಕರ್ನಾಟಕ ರೈತ ಸಂಘ ಮತ್ತು ಕನ್ನಡ ಚಳುವಳಿ ನಾಯಕ ಶ್ರೀ ವಾಟಾಳ್‌ನಾಗರಾಜ್‌ರವರು ತಮ್ಮ ಅನುಮತಿಗಾಗಿ ಕೊಟ್ಟಿದ್ದಾರೆ. ಹಾಗಾಗಿ ತಾವು ಈ ಮೋಷನ್ನನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : - ಸಭಾನಾಯಕರು ಒಪ್ಪಿಗೆ ಕೊಟ್ಟರೆ ಈ ಒಂದು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ.

ಶ್ರೀ ಆರ್.ವಿ ದೇಶಪಾಂಡೆ : - ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವುದಕ್ಕೆ ಇಷ್ಟಪಡುವುದಿಲ್ಲ ಎಂದು ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ನಾವು ಏನು ಒಂದು ಮೋಷನ್ ಕೊಟ್ಟಿದ್ದೇವೆ ಅಂದರೆ ಈ ಸದನದ ಶ್ರೀ ಎಂ. ವೀರಪ್ಪ ಮೊಯಿಲಿಯವರ ಸಚಿವ ಸಂಪುಟದ ಮೇಲೆ...

ಶ್ರೀ ವಾಟಾಳ್‌ನಾಗರಾಜ್ : - ಈಗ ನಾವು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೆ. ಅದನ್ನು ಚರ್ಚೆಗೆ ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ತಾವು ಹೇಳಬೇಕು. ಮೊದಲು ಇದನ್ನು ಮಂಡಿಸುವುದಕ್ಕೆ ಅನುಮತಿಯನ್ನು ತಾವು ಕೊಡಬೇಕು.